# ಡಿಪ್ಲೋಮಾ(ಪಶು ಸಂಗೋಪನೆ) ಶೈಕ್ಷಣಿಕ ಮಾಹಿತಿ/ವಿವರಣಾ ಪತ್ರಿಕೆ (Prospectus)

ಈ ಕೋರ್ಸ್‌ಗೆ ಸಂಬಂಧಪಟ್ಟಂತೆ ನಿಯಮಾವಳಿಗಳು, ಕೋರ್ಸ್‌ನ ಶೈಕ್ಷಣಿಕ ಮಾಹಿತಿ, ಪರೀಕ್ಷೆ ಮತ್ತು ಮೌಲ್ಯಮಾಪನ ಪದ್ಧತಿ ಹಾಗೂ ಶಿಸ್ತು ನಿಯಮಗಳನ್ನು ಒಳಗೊಂಡಿದ್ದು, ನೋಂದಣಿಯ ಸಮಯದಲ್ಲಿ ಅಭ್ಯರ್ಥಿಗಳಿಗೆ ಶೈಕ್ಷಣಿಕ ಮಾಹಿತಿ ಪತ್ರಿಕೆಯನ್ನು ಒದಗಿಸಲಾಗುವುದು.

**ಪ್ರವೇಶಕ್ಕೆ ಶೈಕ್ಷಣಿಕ ಅರ್ಹತೆ ಹಾಗೂ ಆಯ್ಕೆ:**

ಈ ಕೋರ್ಸ್‌ಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಕರ್ನಾಟಕದ ನಿವಾಸಿಯಾಗಿದ್ದು ಒಂದರಿಂದ ಹತ್ತನೇ ತರಗತಿಯವರಿಗೆ ಗ್ರಾಮೀಣ ಪ್ರದೇಶದಲ್ಲಿರುವ ಶಾಲೆಯಲ್ಲಿ ವ್ಯಾಸಂಗ ಮಾಡಿರಬೇಕು. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಎಸ್.ಎಸ್.ಎಲ್.ಸಿ./ ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮೆರಿಟ್ ಹಾಗೂ ರೋಸ್ಟರ್ ಪದ್ಧತಿ ಆಧರಿಸಿ ಅಭ್ಯರ್ಥಿಗಳ ಆಯ್ಕೆ ಮಾಡಲಾಗುವುದು.

**ಸೀಟುಗಳ ಮೀಸಲಾತಿ:**

ಅಭ್ಯರ್ಥಿಗಳನ್ನು ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್‌ಗಳಿಗೆ ಆಯ್ಕೆ ಮಾಡುವಾಗ ಈ ಕೆಳಗಿನಂತೆ ಮೀಸಲಾತಿ ಅನುಸರಿಸಲಾಗುವುದು.

**I.** ಕರ್ನಾಟಕ ಸರಕಾರದ ಆದೇಶದಂತೆ ವರ್ಟಿಕಲ್ ಮೀಸಲಾತಿ ಅನುಸರಿಸಲಾಗುವುದು. ಸರಕಾರದ ಆದೇಶ ನಂ. ಎಸ್‌ಡಬ್ಲೂಎಲ್/251/ಬಿಸಿಎ/84 ದಿ. 31.01.1995 ರಂತೆ ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾದ ಆದೇಶಗಳಂತೆ ಎಸ್.ಸಿ, ಎಸ್.ಟಿ, ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ ವರ್ಗಗಳಿಗೆ ಮೀಸಲಾತಿ ಅನುಸರಿಸಲಾಗುವುದು.

**ಟಿಪ್ಪಣಿ –1:** ಸರಕಾರಿ ಆದೇಶ ನಂ. ಎಸ್‌ಡಬ್ಲೂಎಲ್/225/ಬಿಸಿಎ/2000 ದಿ. 30.03.2002 ರಂತೆ ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಈ ಕೆಳಗಿನ ಅಭ್ಯರ್ಥಿಗಳು 2ಎ, 2ಬಿ, 3ಎ ಮತ್ತು 3ಬಿ ವರ್ಗಗಳಲ್ಲಿ ಮೀಸಲಾತಿಗೆ ಅರ್ಹರಾಗಿರುವುದಿಲ್ಲ.

1. ಮೇಲಿನ ಸರಕಾರಿ ಆದೇಶದ ಐಟಂ–1 ರಡಿಯಲ್ಲಿ ನಮೂದಿಸಿದ ವ್ಯಕ್ತಿಗಳ ಮಗ/ಮಗಳು.
2. ಸರಕಾರಿ ಮತ್ತು ಅರೆ ಸರಕಾರಿ ಸಂಸ್ಥೆಗಳಲ್ಲಿ ಎ–ಶ್ರೇಣಿ, ಬಿ–ಶ್ರೇಣಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಯ ಮಗ/ಮಗಳು ಅಥವಾ ಖಾಸಗಿ ಸಂಸ್ಥೆಯಲ್ಲಿ ಬಿ–ಶ್ರೇಣಿ ಹುದ್ದೆ ಅಧಿಕಾರಿಯ ವೇತನಕ್ಕೆ ಸಮನಾಗಿ (ರೂ. 6000–11,200 ವೇತನ ಶ್ರೇಣಿ) ವೇತನ ಹೊಂದಿರುವ ವ್ಯಕ್ತಿಯ ಮಗ/ಮಗಳು.
3. ಅಭ್ಯರ್ಥಿಯ ಹಾಗೂ ತಂದೆ–ತಾಯಿ/ಪೋಷಕರ ವಾರ್ಷಿಕ ಆದಾಯವು ರೂ. 2 ಲಕ್ಷಕ್ಕಿಂತಲೂ ಮೀರಿದ್ದರೆ, ಅಭ್ಯರ್ಥಿಯು ಹಾಗೂ ತಂದೆ/ತಾಯಿ/ಪೋಷಕರು ಕರ್ನಾಟಕ ಜಮೀನು ಪರಿಷ್ಕರಣೆ ಕಾಯಿದೆ 1961 ರಲ್ಲಿ ನಿಗದಿ ಪಡಿಸಿದಂತೆ 10 ಯೂನಿಟ್ ಕೃಷಿ ಜಮೀನು ಹೊಂದಿದ್ದರೆ ಹಾಗೂ 20 ಎಕರೆಗಿಂತಲೂ ಹೆಚ್ಚಿನ ಪ್ಲಾಂಟೇಶನ್ ಜಮೀನು ಹೊಂದಿದ್ದರೆ.
4. ಶೇ.8ರಷ್ಟು ಸೀಟುಗಳುನ್ನು ಹೈದ್ರಾಬಾದ–ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಮೀಸಲಾತಿಯನ್ನು ಕಲ್ಪಿಸಲಾಗಿದೆ.
5. ವಿಶೇಷ ಗುಂಪಿನ ಅಭ್ಯರ್ಥಿಗಳಿಗೆ(ಎನ್.ಸಿ.ಸಿ/ಕ್ರೀಡೆ/ಸ್ಕೌಟ್ಸ್&ಗೈಡ್ಸ್/ಡಿಫೆನ್ಸ್/ಮಾಜಿ ಸೈನಿಕ/ಅಂಗವಿಕಲ/ಆಂಗ್ಲೋ ಇಂಡಿಯನ್ ಇವುಗಳಿಗೆ ಮೀಸಲಾತಿ ನೀಡಲಾಗುವುದು.

**ಟಿಪ್ಪಣಿ:–2** ಈ ಮೇಲಿನ ಗುಂಪುಗಳಲ್ಲಿ ಮೀಸಲಾತಿ ಬಯಸುವ ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಾಧಿಕಾರದಿಂದ ಸೂಕ್ತ ಪ್ರಮಾಣ ಪತ್ರ ಸಲ್ಲಿಸಬೇಕು.

**ಟಿಪ್ಪಣಿ–3:** ಎಸ್.ಸಿ./ಎಸ್.ಟಿ ಹಾಗೂ ಇತರೆ ಹಿಂದುಳಿದ ವರ್ಗಗಳಲ್ಲಿ (ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ) ಮೀಸಲಾತಿ ಬಯಸುವ ಅಭ್ಯರ್ಥಿಯು ಸಂಬಂಧಪಟ್ಟ ಪ್ರಾಧಿಕಾರದಿಂದ ಸೂಕ್ತ ಪ್ರಮಾಣ ಪತ್ರ ಸಲ್ಲಿಸಬೇಕು.

**ಟಿಪ್ಪಣಿ–4:** ವರ್ಟಿಕಲ್ ಮೀಸಲಾತಿಯನ್ವಯ ಆಯಾ ವರ್ಗಗಳಲ್ಲಿ ಅರ್ಹ ಅಭ್ಯರ್ಥಿಗಳ ಕೊರತೆಯಿಂದಾಗಿ ಸೀಟುಗಳು ಭರ್ತಿಯಾಗದೇ ಉಳಿದಲ್ಲಿ ಇಂತಹ ಮೀಸಲಾತಿ ಸೀಟುಗಳನ್ನು "ಸಾಮಾನ್ಯ ವರ್ಗ"ದ ಸೀಟುಗಳೆಂದು ಪರಿಗಣಿಸಿ, ಸಾಮಾನ್ಯ ವರ್ಗದಲ್ಲಿನ ಅಭ್ಯರ್ಥಿಗಳಿಗೆ ಮೆರಿಟ್ ಆಧಾರದಲ್ಲಿ ಪ್ರವೇಶ ನೀಡಲಾಗುವುದು.

## ಪ್ರವೇಶಕ್ಕೆ ಅರ್ಜಿ:

ಈ ಕೋರ್ಸ್‌ಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ **www.kvafsu.edu.in** ನಲ್ಲಿ ಪಡೆಯಬಹುದು. ಸಂಪೂರ್ಣವಾಗಿ ಭರ್ತಿಮಾಡಿದ ಅರ್ಜಿಯನ್ನು **"ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು–560024"** ಇವರಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸಬೇಕು.

## ಪ್ರವೇಶ ವಿಧಾನ:

ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸ್‌ಗೆ ಪ್ರವೇಶವನ್ನು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಡೆದ ಅಂಕಗಳ ಮೇರೆಗೆ ಸರಕಾರದ ಮೀಸಲಾತಿ ಆದೇಶದಂತೆ ಹಾಗೂ ಮೆರಿಟ್ ಆಧರಿಸಿ ಅರ್ಹ ಅಭ್ಯರ್ಥಿಗಳಿಗೆ ಪ್ರವೇಶ ನೀಡಲಾಗುವುದು.

## ಡಿಪ್ಲೋಮಾ (ಪಶು ಸಂಗೋಪನೆ) ಕೋರ್ಸ್‌ನ ಶುಲ್ಕದ ವಿವರ:

ಆಯ್ಕೆಯಾದ ಅಭ್ಯರ್ಥಿಗಳು ಈ ಕೆಳಗಿನಂತೆ ಸಂಬಂಧಪಟ್ಟ ಡಿಪ್ಲೋಮಾ (ಪಶು ಸಂಗೋಪನೆ) ಕೋರ್ಸ್‌ಗೆ ನಿಗದಿಪಡಿಸಿದ ಶುಲ್ಕವನ್ನು ಪ್ರವೇಶದ ದಿನದಂದು ಪ್ರವೇಶ ಪಡೆದ ಪಶುಸಂಗೋಪನೆ ಪಾಲಿಟೆಕ್ನಿಕ್ ನಲ್ಲಿ ಪಾವತಿ ಮಾಡಬೇಕು.

## ಅಭ್ಯರ್ಥಿಗಳು ಈ ಕೆಳಗಿನ ಅಂಶಗಳನ್ನು ಗಮನಿಸಬೇಕು:

- ಪ್ರವೇಶದ ವಿವರಣಾ ಪತ್ರಿಕೆ (prospectus)ಯಲ್ಲಿ ನಿಗದಿಪಡಿಸಿದಂತೆ ಪ್ರವೇಶದ ಅರ್ಜಿಯ ಎಲ್ಲ ವಿವರಗಳನ್ನು ತಿಳಿದಿರಬೇಕು ಹಾಗೂ ಅರ್ಜಿಯೊಂದಿಗೆ ಅಭ್ಯರ್ಥಿಗಳು ತಮ್ಮ ಸೂಕ್ತ ದಾಖಲೆಗಳ ಪ್ರತಿಗಳನ್ನು ಲಗತ್ತಿಸಬೇಕು. ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಈ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಅನಿವಾರ್ಯ ಕಾರಣಗಳಿಂದ ಯಾವುದೇ ಬದಲಾವಣೆಯಾದಲ್ಲಿ ಅದನ್ನು ಪ್ರಮುಖ ದಿನಪತ್ರಿಕೆಗಳ ಮೂಲಕ ಪ್ರಕಟಿಸಲಾಗುವುದು. ಈ ಕುರಿತಂತೆ ಪ್ರತಿ ಅಭ್ಯರ್ಥಿಗೆ ಮಾಹಿತಿಯನ್ನು ತಿಳಿಸಲಾಗುವುದಿಲ್ಲ.

- ಈ ಪ್ರವೇಶವು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಕಾಯ್ದೆ–ಕಾನೂನುಗಳಿಗೆ ಹಾಗೂ ಸರಕಾರಿ ಆದೇಶಗಳ ಅನ್ವಯ ಅಭ್ಯರ್ಥಿಯ ಅರ್ಹತೆಯನ್ನು ಅವಲಂಬಿಸಿದೆ.
- ಮೌಖಿಕ ಸಂದರ್ಶನಕ್ಕೆ ಹಾಜರಾಗುವಾಗ ಅಭ್ಯರ್ಥಿಯು ಎಲ್ಲಾ ಮೂಲ ದಾಖಲೆಗಳನ್ನು ಪರಿಶೀಲನೆಗೆ ಒದಗಿಸಬೇಕು ಮತ್ತು ಆಯ್ಕೆ ಪತ್ರ ಪಡೆದ ನಂತರ ಆಯ್ಕೆಯಾದ ಪಾಲಿಟೇಕ್ನಿಕ್‌ಗಳಿಗೆ ಹೋಗಿ ನಿಗದಿತ ಪ್ರವೇಶಾತಿ ಶುಲ್ಕವನ್ನು ಡಿ.ಡಿ. ಮುಖಾಂತರ ದಿನಾಂಕ **31.08.2017**ರ ಒಳಗಾಗಿ ಪ್ರಾಂಶುಪಾಲರಿಗೆ ಸಲ್ಲಿಸಿ ಪ್ರವೇಶಾತಿ ಪತ್ರ ಪಡೆಯತಕ್ಕದ್ದು.

## ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿ ನಗರ ಬೀದರ–01

2017–18 ನೇ ಸಾಲಿನಲ್ಲಿ ಡಿಪ್ಲೋಮಾ (ಪಶುಸಂಗೋಪನೆ) ಕೋರ್ಸಗೆ ಆಯ್ಕೆಯಾದ ಅಭ್ಯರ್ಥಿಯು ಸಂದಾಯ ಮಾಡಬೇಕಾದ ಶುಲ್ಕದ ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ವಿವರ | 1ನೇ ಸೆಮಿಸ್ಟರ್ | | 2ನೇಯ ಸೆಮಿಸ್ಟರ್ | | 3ನೇಯ ಸೆಮಿಸ್ಟರ್ | | 4ನೇಯ ಸೆಮಿಸ್ಟರ್ | |
|---|---|---|---|---|---|---|---|---|---|
| | | ಸಾಮಾನ್ಯ ಹಾಗೂ ಇತರೆ ವರ್ಗ | ಎಸ್‌ಸಿ/ಎಸ್‌ಟಿ/ಪ್ರ.ವರ್ಗ –1 | ಸಾಮಾನ್ಯ ಹಾಗೂ ಇತರೆ ವರ್ಗ | ಎಸ್‌ಸಿ/ಎಸ್‌ಟಿ/ಪ್ರ.ವರ್ಗ–1 | ಸಾಮಾನ್ಯ ಹಾಗೂ ಇತರೆ ವರ್ಗ | ಎಸ್‌ಸಿ/ಎಸ್‌ಟಿ/ಪ್ರ.ವರ್ಗ–1 | ಸಾಮಾನ್ಯ ಹಾಗೂ ಇತರೆ ವರ್ಗ | ಎಸ್‌ಸಿ/ಎಸ್‌ಟಿ/ಪ್ರ.ವರ್ಗ –1 |
| 1 | ನೋಂದಣಿ | 82 | 82 | 82 | 82 | 82 | 82 | 82 | 82 |
| 2 | ಬೋಧನಾ ಶುಲ್ಕ | 2195 | – | – | – | 2195 | – | – | – |
| 3 | ಗ್ರಂಥಾಲಯ ಶುಲ್ಕ | 732 | 732 | – | – | 732 | 732 | – | – |
| 4 | ಪ್ರಯೋಗಾಲಯ ಶುಲ್ಕ | 80 | – | 81 | – | 80 | – | 81 | – |
| 5 | ಪ್ರವೇಶ ಶುಲ್ಕ | 293 | – | – | – | 293 | – | – | – |
| 6 | ಕ್ರೀಡಾ ಶುಲ್ಕ | 80 | – | 82 | – | 80 | – | 82 | – |
| 7 | ಶೈಕ್ಷಣಿಕ ಮಾಹಿತಿ ಮತ್ತು ನಿಯಮಗಳ ಕೈಪಿಡಿ | 66 | 66 | | – | – | – | – | – |
| 8 | ವೈದ್ಯಕೀಯ ಶುಲ್ಕ | 66 | 66 | 66 | 66 | 66 | 66 | 66 | 66 |
| 9 | ಭದ್ರತಾ ಠೇವಣಿ (ಮರುಪಾವತಿಗೊಳಪಟ್ಟಿದ್ದು) | 293 | – | – | – | – | – | – | – |
| 10 | ಪರೀಕ್ಷಾ ಶುಲ್ಕ | 293 | – | 293 | – | 293 | – | 293 | – |
| 11 | ಗುರುತಿನ ಚೀಟಿ ಶುಲ್ಕ | ನಿಗದಿಪಡಿಸಲಾಗುವುದು | | | | | | | |
| 12 | ಜೀವವಿಮೆ ಶುಲ್ಕ | ನಿಗದಿಪಡಿಸಲಾಗುವುದು | | | | | | | |
| | ಒಟ್ಟು | **4180** | **946** | **604** | **148** | **3821** | **880** | **604** | **148** |

**<u>ನೋಂದಣಿ:</u>**

ವಿಶ್ವವಿದ್ಯಾಲಯದಿಂದ ಪ್ರವೇಶ ಪಡೆದ ಅಭ್ಯರ್ಥಿಯು ನೋಂದಣಿಯಾದ ನಂತರವೇ ಪ್ರವೇಶ ಪ್ರಕ್ರಿಯೆಯು ಪೂರ್ಣವಾಗುವುದು. ಆದ್ದರಿಂದ ಪ್ರವೇಶ ಪಡೆದ ಅಭ್ಯರ್ಥಿಗಳು ಖುದ್ದಾಗಿ ಹಾಜರಾಗಿ ಡಿಪ್ಲೋಮಾ ಕೋರ್ಸ್‌ಗೆ ನೋಂದಣಿ ಮಾಡಿಸಬೇಕು. ಮೊದಲನೆಯ ಸೆಮಿಸ್ಟರ್‌ದಲ್ಲಿ ನಿಗದಿತ ದಿನಾಂಕದೊಳಗೆ ಕೋರ್ಸ್‌ಗೆ ನೋಂದಣಿ ಮಾಡದಿದ್ದಲ್ಲಿ ಅಂತಹ ಅಭ್ಯರ್ಥಿಯ ಆಯ್ಕೆ ರದ್ದಾಗುವುದು.

ವಿಶ್ವವಿದ್ಯಾಲಯದಿಂದ ಪ್ರವೇಶ ಪತ್ರ ಪಡೆದ ಅಭ್ಯರ್ಥಿಯು ನಿಗದಿಪಡಿಸಿದ ಎಲ್ಲ ಶುಲ್ಕವನ್ನು ಪಾವತಿಮಾಡಿ ಸೆಮಿಸ್ಟರ್ ಪ್ರಾರಂಭದ ಮೊದಲನೆಯ ದಿನದಂದು ನೋಂದಣಿಗಾಗಿ ಸಂಬಂಧಪಟ್ಟ ಪಶುಸಂಗೋಪನೆ ಪಾಲಿಟೆಕ್ನಿಕ್ ನಲ್ಲಿ ಹಾಜರಿರಬೇಕು.

ಹೊಸದಾಗಿ ಪ್ರವೇಶ ಪಡೆದ ಅಭ್ಯರ್ಥಿಗಳ ಅನುಕೂಲಕ್ಕಾಗಿ ಸಂಬಂಧಿಸಿದ ಪ್ರಾಚಾರ್ಯರು ಓರಿಯಂಟೇಶನ್ ಕಾರ್ಯಕ್ರಮ ಹಮ್ಮಿಕೊಂಡು ಕೋರ್ಸ್‌ಗಳ ಬಗ್ಗೆ ವಿವರ ಮಾಹಿತಿ ನೀಡುವರು. ಕಾಯ್ದಿಟ್ಟ ಅಭ್ಯರ್ಥಿಗಳ (Wait List) ನೋಂದಣಿ ಅವಧಿಯು ಸೆಮಿಸ್ಟರ್ ಪ್ರಾರಂಭವಾದ ದಿನಾಂಕದಿಂದ ನಾಲ್ಕು ವಾರಗಳ ಅವಧಿಗೆ ಕೊನೆಗೊಳ್ಳುವುದು. ಹೊಸದಾಗಿ ಪ್ರವೇಶ ಪಡೆದ ಅಭ್ಯರ್ಥಿಯ ಹಾಜರಾತಿಯನ್ನು ಆತನು/ಅವಳು ನೋಂದಣಿ ಮಾಡಿಸಿದ ದಿನಾಂಕದಿಂದ ಪರಿಗಣಿಸಲಾಗುವುದು.

ಪ್ರವೇಶ ಪಡೆದ ಅಭ್ಯರ್ಥಿಯು ಮೊದಲನೆಯ ಸೆಮಿಸ್ಟರ್‌ದಲ್ಲಿ ಅಭ್ಯಸಿಸುವುದು ಕಡ್ಡಾಯ, ಯಾವುದೇ ಕಾರಣಕ್ಕೂ ಮೊದಲ ಸೆಮಿಸ್ಟರ್‌ದಲ್ಲಿ ಗೈರಾದಲ್ಲಿ ಅವರ ಪ್ರವೇಶವು ರದ್ದಾಗುವುದು. ಮೊದಲ ಸೆಮಿಸ್ಟರ್‌ದಲ್ಲಿ ಅಭ್ಯರ್ಥಿಯು ಕನಿಷ್ಠ ಒಂದು ವಿಷಯದಲ್ಲಿ SA (ಕಡಿಮೆ ಹಾಜರಾತಿ) US (ಅಸಮಾಧಾನಕರ) ಅಥವಾ ಈ (ಫೇಲ್) ಈ ಶ್ರೇಣಿಗಳನ್ನು ಹೊರತುಪಡಿಸಿ ಉಳಿದ ಶ್ರೇಣಿಯನ್ನು ಪಡೆದು ಪಾಸಾಗಬೇಕು, ಇಲ್ಲದಿದ್ದಲ್ಲಿ ಅಂತಹವರ ಪ್ರವೇಶವು ರದ್ದಾಗುವುದು.

**ವಸತಿನಿಲಯ ಸೌಲಭ್ಯ :** ಲಭ್ಯವಿದ್ದಲ್ಲಿ ಮಾತ್ರ ಕೊಡಲಾಗುವುದು

**ವೈದ್ಯಕೀಯ ಸೌಲಭ್ಯ:** ಎಲ್ಲಾ ಶಿಕ್ಷಣ ಕೇಂದ್ರಗಳ ಆವರಣದಲ್ಲಿ ಪ್ರಾಥಮಿಕ ಆರೋಗ್ಯ ಚಿಕಿತ್ಸೆಗಾಗಿ ಸೂಕ್ತ ವೈದ್ಯಕೀಯ ಸೌಲಭ್ಯವಿರುವುದು.

**ಸಾಮಾನ್ಯ ಮಾಹಿತಿ:**

ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ನಿಯಮಾವಳಿಗಳಿಗೆ ಬದ್ಧವಾಗಿರಬೇಕು. ವಿದ್ಯಾರ್ಥಿಗಳ ಶಿಸ್ತು ಬದ್ಧ ನಡವಳಿಕೆಗಳ ವಿವರವನ್ನು ವಿಶ್ವವಿದ್ಯಾಲಯದ ಶೈಕ್ಷಣಿಕ ಮಾಹಿತಿ ಹಾಗೂ ನಿಯಮಾವಳಿಗಳ ಕೈಪಿಡಿಯಲ್ಲಿ ವಿವರಿಸಲಾಗಿದೆ. ಪ್ರವೇಶಪಡೆದ ಎಲ್ಲಾ ಅಭ್ಯರ್ಥಿಗಳು ತಾವು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ನಿಯಮಾವಳಿಗಳಿಗೆ ಹಾಗೂ ಕಾಲಕಾಲಕ್ಕೆ ತಿದ್ದುಪಡಿಯಾಗುವ ನಿಯಮಾವಳಿಗಳಿಗೆ ಬದ್ಧವಾಗಿದ್ದು, ಅದರಂತೆ ನಡೆದುಕೊಳ್ಳುವ ಬಗ್ಗೆ ಬರವಣಿಗೆಯಲ್ಲಿ ಮುಚ್ಚಳಿಕೆ ಪತ್ರ ಕೊಡುವುದು ಕಡ್ಡಾಯವಾಗಿರುವುದು.

ಈ ವಿವರಣಾ ಪತ್ರಿಕೆ (Prospectus)ನಲ್ಲಿ ನಮೂದಿಸಿದ/ನಿಗದಿಪಡಿಸಿದ ಯಾವುದೇ ಅಥವಾ ಎಲ್ಲಾ ನಿಬಂಧನೆಗಳನ್ನು ಬದಲಾವಣೆ ಮಾಡುವ ಹಕ್ಕನ್ನು ವಿಶ್ವವಿದ್ಯಾಲಯ ಹೊಂದಿದೆ.